ಸಿ.ಸಿ.ನಂ.1239/2025

ಡಿ.ಡಬ್ಲೂಃ 1

ದಿನಾಂಕಃ 06/07/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಆರೋಪಿ ಪರ ವಕೀಲರಿಂದ ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.**

**ಪಾಟೀ ಸವಾಲು ಪಿರ್ಯಾದಿ ಪರವಾಗಿ ಶ್ರೀ ಎಂ.ಸಿ.ಡಿ ವಕೀಲರಿಂದ**

1. ನಾನು ಎಂ.ಟೆಕ್ ಪದವೀದರನಾಗಿರುತ್ತೇನೆ. ಪಿರ್ಯಾದುದಾರರು ನನ್ನ ಚಿಕ್ಕಪ್ಪ ಎಂದರೆ ಸರಿ. ನಾನು ನನ್ನ ಚಿಕ್ಕಪ್ಪನ ಬಳಿ ಹೊಸದಾಗಿ ವ್ಯಾಪಾರ ಮಾಡುವ ಸಲುವಾಗಿ ಸಾಲವನ್ನು ಕೇಳಿದ್ದೇನು ಎಂದರೆ ಸುಳ್ಳು. ಪಿರ್ಯಾದುದಾರರು ನನಗೆ ರೂ.5,00,000/- ರೂಾ ಗಳಂತೆ 2 ಬಾರಿ ಒಟ್ಟು ರೂ.10,00,000/- ಗಳನ್ನು ಸಾಲವಾಗಿ ಕೊಟ್ಟಿರುತ್ತಾರೆ ಎಂದರೆ ಸುಳ್ಳು. ನಾನು ಪಿರ್ಯಾದುದಾರರಿಗೆ 2 ವರ್ಷಗಳ ಒಳಗೆ ಸಾಲವನ್ನು ಮರುಪಾವತಿ ಮಾಡುತ್ತೇನೆ ಎಂದು ಹೇಳಿ ರೂ.10,00,00/- ಗಳನ್ನು ಪಡೆದುಕೊಂಡಿರುತ್ತೇನೆ ಎಂದರೆ ಸುಳ್ಳು. ನಾನು ತೆಗೆದುಕೊಂಡಂತಹ ಸಾಲದ ಬಾಬ್ತು ಪಿರ್ಯಾದುದಾರರಿಗೆ ನಿಪಿ-1 ಮತ್ತು 2 ಚೆಕ್ಕುಗಳನ್ನು ಕೊಟ್ಟಿರುತ್ತೇನೆ ಎಂದರೆ ಸುಳ್ಳು. ನಾನು ಒಪ್ಪಿಕೊಂಡ ರೀತಿಯಲ್ಲಿ ಪಿರ್ಯಾದುದಾರರಿಗೆ 2 ವರ್ಷಗಳ ಒಳಗೆ ಸಾಲವನ್ನು ಮುರುಪಾವತಿ ಮಾಡಿರುವುದಿಲ್ಲ ಎಂದರೆ ಸುಳ್ಳು.

2. ಪಿರ್ಯಾದುದಾರರು ನನಗೆ ನಿಪಿ-6 ರಂತೆ ನೋಟೀಸ್ಸನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟೀಸ್ಸಿಗೆ ನಾನು ನಿಪಿ-9 ರಂತೆ ಪ್ರತಿಯುತ್ತ ನೀಡಿರುತ್ತೇನೆ ಎಂದರೆ ಸರಿ. ನಾನು ಪಡೆದುಕೊಂಡಿರುವಂತಹ ರೂ.10,00,000/- ಸಂಬಂಧಿಸಿದಂತೆ ಪಿರ್ಯಾದುದಾರರಿಗೆ 2 ಚೆಕ್ಕುಗಳನ್ನು ಕೊಟ್ಟಿರುತ್ತೇನೆ ಎಂದರೆ ಸುಳ್ಳು. ನಾನು ಪಿರ್ಯಾದುದಾರರಿಗೆ ಮೋಸ ಮಾಡಿರುವ ಕಾರಣದಿಂದ ಪಿರ್ಯಾದುದಾರರು ಈ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸುಳ್ಳು. ಪಿರ್ಯಾದುದಾರರು ಮತ್ತು ಅವರ ಮಗನಾದ ಪ್ರಶಾಂತ್ ಇಬ್ಬರು ನಮ್ಮ ಮನೆಗೆ ಬಂದು ನನಗೆ ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸುಳ್ಳು. ನಾನು ಪಿರ್ಯಾದುದಾರರಿಂದ ರೂ.10,00,000/- ಸಾಲವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸುಳ್ಳು. ಸದರಿ ರೂ.10,00,000/- ಗಳನ್ನು ನಾನು ಮರುಪಾವತಿ ಮಾಡಿರುವುದಿಲ್ಲ ಎಂದರೆ ಸುಳ್ಳು. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಜಯಲಕ್ಷ್ಮೀ ಎನ್. ಬಿ)

ಪ್ರಧಾನ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ,

ಕೆಜಿಎಫ್